ಕೊಟ್ಟು ಈರೀತಿ ಮಾಡಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ನಾವು ಒಂದು ಸಬ್ ಕಮಿಟಿಯನ್ನು ಮಾಡಿದ್ದೇವೆ. ನಗರ-ಪಾಲಿಕಾ ಆಯುಕ್ತರು ಮತ್ತು ಪರಿಣತರುಗಳಿಂದ ವರದಿ ಬಂದಿದೆ. ಅದನ್ನು ಪರಿಶೀಲನೆ ಮಾಡಿ ನಗರ-ಪಾಲಿಕೆಯವರಿಗೆ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದೇವೆ. ಒಪ್ಪಿಗೆ ಬಂದಮೇಲೆ ಅಧಿಸೂಚನೆಯನ್ನು ನೋಡುತ್ತೇವೆ. ಈ ಸಮಿಕ್ಷೆಯಲ್ಲಿ ಆಯುಕ್ತರು, ಅಧ್ಯಕ್ಷರು, ನಗರ-ಪಾಲಿಕೆ ನಿರ್ದೇಶಕರು, ಚೀಫ್ ಆರ್ಕಿಟೆಕ್ಟ್ ಡಿ. ಟಿ ವಿಶ್ವನಾಥ ಎಂದು ಇದ್ದಾರೆ, ಮತ್ತು ಅಧ್ಯಕ್ಷರ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕರ್ನಾಟಕ, ಇದೇ ಮುಂತಾದವರಿಂದ-ಜನ ಪರಿಣತರನ್ನು ಸೇರಿಸಿ ಒಂದು ಪುನರ್ ಪರಿಶೀಲನಾ ಸಮಿತಿಯನ್ನು ಮಾಡಿದ್ದೇವೆ. ಅವರಿಂದ ಒಂದು ವರದಿ ಬಂದಿದೆ ಇಷ್ಟರಲ್ಲೇ ಅದರ ಬಗ್ಗೆ ಎಕ್ಸಾಮಿನ್ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ಸ್ವಲ್ಪ ಕೇಳಿರಿ. ಪ್ರಶ್ನೋತ್ತರವೇಳೆ ೨೫ಕ್ಕೆ ಪ್ರಾರಂಭವಾಯಿತು. ಈಗ ೩-೧೫ ಆಗುತ್ತಿದೆ. ಒಂದು ಗಂಟೆಯಾಯಿತು. ನೀವು ವಿರೋಧಪಕ್ಷದ ನಾಯಕರು ಇದ್ದೀರಿ. ಈಗ ಏನು ಮಾಡಬೇಕು ಹೇಳಿ. ಈಗ ಪ್ರಶ್ನೋತ್ತರವೇಳೆ ಮುಗಿಯಿತು ಎಂದು ಹೇಳಲಿಕ್ಕೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಕಂಟ್ರೋಲ್ ಮಾಡಿ, ಒಂದು ತಾಸಿನಲ್ಲಿ ಮಾಡಿದ್ದೀರಿ. ನಮ್ಮ ಆಭ್ಯಂತರವೇನಿಲ್ಲ.

ಅಧ್ಯಕ್ಷರು.—ಎಲ್ಲರೂ ಸಪ್ಲಿಮೆಂಟರಿಯನ್ನು ಕೇಳುವುದಕ್ಕೆ ಶುರುಮಾಡಿದರೆ ಏನು ಮಾಡುವುದು

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಯಾರನ್ನು ಕರೆಯುತ್ತೀರೋ ಅವರು ಕೇಳುತ್ತಾರೆ.

ಅಧ್ಯಕ್ಷರು.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈಗ ೧೧ ಪ್ರಶ್ನೆಗಳು ಇವೆ. ಅವುಗಳನ್ನು ಲ್ಯಾಪ್ಸ್ ಮಾಡುವುದಿಲ್ಲ. ಪ್ರಶ್ನೋತ್ತರವೇಳೆ ಮುಗಿದಿದ್ದರೂ, ಎಲ್ಲರ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತೊಮ್ಮೆ ಗೈರು ಹಾಜರಾದವರನ್ನು ಕರೆಯುತ್ತೇನೆ. ಯಾರಾ ಪ್ರಶ್ನೆ ಕೇಳಿದ್ದಾರೋ ಅವರಿಗೆ ಮಾತ್ರ ಕೇಳಲು ಅವಕಾಶ ಕೊಡುತ್ತೇನೆ.

ಕೊಡಚಾದ್ರಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

೨೫೫೯. ಶ್ರೀ ಬಿ. ಸ್ವಾಮಿರಾವ್, (ಹೊಸನಗರ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಹೊಸನಗರ ತಾಲ್ಲೂಕು ಕೊಡಚಾದ್ರಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಯೋಜನೆ ಯಾವ ಹಂತದಲ್ಲಿದೆ ?

೨) ಕೊಡಚಾದ್ರಿಯನ್ನು ಹೆಲಿಪ್ಯಾಡ್ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್, (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

೧) ಕೊಡಚಾದ್ರಿ ಬೆಟ್ಟವನ್ನು ಪ್ರವಾಸಿಧಾಮವೆಂದು ಗುರುತಿಸಲಾಗಿದೆ. ಬೆಟ್ಟಕ್ಕೆ ರಸ್ತೆ ನಿರ್ಮಾಣವಾದ ಮೇಲೆ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು.

೨) ಇಲ್ಲ.

ಶ್ರೀ ಬಿ ಸ್ವಾಮಿರಾವ್,—ಇದು ನನ್ನ ಕ್ಷೇತ್ರ ಮತ್ತು ನನ್ನ ಊರಿಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಮಾನ್ಯ ಸಚಿವರುಕೆ ನೀಡಿದ ಉತ್ತರದಲ್ಲಿ ಕೊಡಚಾದ್ರಿ ಬೆಟ್ಟವನ್ನು ಪ್ರವಾಸಿ ಧಾಮವೆಂದು ಗುರುತಿಸಲಾಗಿದೆ. ಬೆಟ್ಟಕ್ಕೆ ರಸ್ತೆ ನಿರ್ಮಾಣವಾದಮೇಲೆ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಈಗಾಗಲೇ ರಸ್ತೆ ಆಗಿಬಿಟ್ಟಿದೆ.

ಮಾನ್ಯ ಎಂ. ಪಿ. ಪ್ರಕಾಶ್‌ರವರು ಮಾರುತಿಕಾರಿನಲ್ಲಿ ಹೋಗಬಹುದು. ಯಾರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೋ. ಮಂತ್ರಿಗಳು ಇದನ್ನು ತಿದ್ದಿಕೊಳ್ಳಬೇಕೆಂದು ಹೇಳುತ್ತೇನೆ. ಇದ್ದಕ್ಕೆ ಮೊದಲು ಉತ್ತರವನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಈಗಾಗಲೇ ರಸ್ತೆಗಳ ತೀಲಸವನ್ನು ಜಿಲ್ಲಾ ಪರಿಷತ್ ಕೈಗೊಂಡಿದ್ದು ೨೫-೯-೧೯೮೫ ರಿಂದ ಗುತ್ತಿಗೆಯನ್ನು ಕೊಟ್ಟು ಜಲ್ಲೆ ಕಾರ್ಯಕ್ರಮಕ್ಕೆ ೩,೨೨,೫೬೦ ರೂಪಾಯಿಗಳನ್ನು ವಿಚ್ರ್ಯಮಾಡಲಾಗಿದೆ. ಇದರಲ್ಲಿ ಎರಡು ಸಣ್ಣ ಸೇತುವೆಗಳು ಆಗಬೇಕಾಗಿದೆ. ರಸ್ತೆ ಸಂಪೂರ್ಣವಾಗಿ ಆದತಕ್ಷಣ, ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ರಾಜ್ಯ ಸರ್ಕಾರ ಅಲ್ಲಿ ಗಿರಿಧಾಮವೆಂದನ್ನು ಪ್ರವಾಸಿಧಾಮವೆಂದನ್ನಾಗಿ ಘೋಷಿತವಾಗಿಯೂ ಮಾಡುತ್ತೇವೆ, ಎಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಕೊಡಚಾದ್ರಿಗೆ ಹೆಲಿಪ್ಯಾಡ್ ಮಾಡುವ ವಿಚಾರವನ್ನು ಕೇಳಿದೆ. ಇಲ್ಲ ವೆಂದು ಹೇಳಿದ್ದಾರೆ. ಎಷ್ಟೂ ಮಂತ್ರಿಗಳ ಮನೆಗೂ ಹೆಲಿಪ್ಯಾಡ್ ಮಾಡಿದ್ದಾರೆ.ಅದು ಒಳ್ಳೆಯ ಕೇಂದ್ರ ವೆಂದು ಮಂತ್ರಿಗಳೇ ಒಪ್ಪಿಕೊಳ್ಳುತ್ತಿರುವುದರಿಂದ ಏತಕ್ಕೆ ಅಲ್ಲಿ ಹೆಲಿಪ್ಯಾಡ್ ಮಾಡಬಾರದು ? ಸರ್ಕಾರ ಏತಕ್ಕೆ ಇದನ್ನು ಪರಿಶೀಲಿಸಬಾರದು ?

ಶ್ರೀ ಎಂ ಪಿ. ಪ್ರಕಾಶ್.—ರಾಜ್ಯ ಸರ್ಕಾರದ ಮಂತ್ರಿಗಳ ಮನೆ ಮುಂದೆ ಹೆಲಿಪ್ಯಾಡ್ ಇಲ್ಲ. ಕೇಂದ್ರ ಸರ್ಕಾರದ ಮಂತ್ರಿಗಳ ಮನೆ ಮುಂದೆ ಇದ್ದರೆ ಅದನ್ನು ಪರಿಶೀಲಿಸಿ ಉತ್ತರಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂತ್ರಿಗಳ ಮನೆ ಮುಂದೆ ಹೆಲಿಪ್ಯಾಡ್ ಇಲ್ಲವೆ ?

ಶ್ರೀ ಎಂ. ಪಿ. ಪ್ರಕಾಶ್.—ದೊಡ್ಡ ಮನೆಯಲ್ಲಿ ಹೆಲಿಪ್ಯಾಡ್ ಇದೆ. ದೊಡ್ಡಮನೆ ಎಂಬುದು ಒಂದು ಗ್ರಾಮ, ಅದು ಮಂತ್ರಿಗಳ ಮನೆ ಅಲ್ಲ.

ಶ್ರೀ ಆರ್.ಎನ್. ನಾಯಕ್.—ದೊಡ್ಡಮನೆ ಮನೆ ಅಲ್ಲವೆ? ಅದು ಮುಖ್ಯ ಮಂತ್ರಿಗಳ ಮನೆ ಅಲ್ಲವೆ ?

ಶ್ರೀ ಬಿ. ಸ್ವಾಮಿರಾವ್.—ಮುಖ್ಯಮಂತ್ರಿಗಳ ಮನೆ ದೊಡ್ಡ ಮನೆ. ದೊಡ್ಡಮನೆ ರಾಮಕೃಷ್ಣ ಹೆಗಡೆಯವರು ಎಂದು ಅವರನ್ನು ಕರೆಯುತ್ತಾರೆ.

ಶ್ರೀ ಎಂ.ಪಿ ಪ್ರಕಾಶ್.—ಮುಖ್ಯಮಂತ್ರಿಗಳು ಹುಟ್ಟಿದ ಸ್ಥಳ ದೊಡ್ಡಮನೆ. ಅದು ಒಂದು ಹಳ್ಳಿ.

(ಶ್ರೀ ಸ್ವಾಮಿರಾವ್ ಮತ್ತು ಶ್ರೀ ನಾಯಕರವರು ಪುನಃ ಪ್ರಶ್ನೆ ಕೇಳಲು ಪ್ರಯತ್ನಿಸುತ್ತಿದ್ದರು)

ಅಧ್ಯಕ್ಷರು.—ಇಷ್ಟು ಸಾಕು ನಾಯಕರೆ, ಸ್ವಾಮಿರಾವ್, ನಿಮಗೆ ೩ ಸಾರಿ ಅವಕಾಶ ಕೊಟ್ಟಿದ್ದೇನೆ, ಸಾಕು ಕೂರಿ

ಅಧ್ಯಕ್ಷರು.—ಚಿಕ್ಕಬೋರಯ್ಯನವರ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ.

ಸವದತ್ತಿ ತಾಲ್ಲೂಕಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ

೨೨೩. ಶ್ರೀ ಶಿವಾನಂದ ಎಚ್ ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪೌರಾಡಳಿತ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವದತ್ತಿ ತಾಲ್ಲೂಕಿನ ಹೊಸಮನಿ ಗ್ರಾಮದಲ್ಲಿ ಟಿ ಕ್ಕಿಂದ ಕುಡಿಯುವ ನೀರನ್ನು ಎಂದಿನಿಂದ ಸರಬರಾಜು ಮಾಡಲಾಗುತ್ತಿದೆ? ಮತ್ತು ಇದಕ್ಕೆ ವಿಚ್ರ್ಯಗುವ ಹಣವೆಷ್ಟು ?